ಶ್ರೀ ಎಚ್. ಸಿದ್ದವೀರಪ್ಪ.—ಹೌದು, ನಾನೂ ಆ ಕಮಿಟಿಯ ಸದಸ್ಯನಾಗಿದ್ದೆ. ಕಮಿಟಿ ತನ್ನ ವರದಿಯನ್ನೊಪ್ಪಿಸಿದೆ.

ಶ್ರೀ ಜಿ. ಬಸಪ್ಪ.—ಈ ವರದಿಯ ಮೇರೆ ತಾವು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದಿನ್ನೂ ಸರ್ಕಾರಕ್ಕೆ ಬರಬೇಕು.

ಶ್ರೀ ಜಿ. ಬಸಪ್ಪ.—ಅವರು ವರದಿಕೊಟ್ಟು ಎಷ್ಟು ದಿವಸವಾಯಿತು ?

Sri H. SIDDAVEERAPPA.—It is yet in the Registrar's office for finalising it.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇದೇ ರೀತಿ ರೆಗ್ಯುಲೇಟೆಡ್ ಮಾರ್ಕೆಟ್ ಹುಬ್ಬಳ್ಳಿಯಲ್ಲಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಇದೆ.

ಶ್ರೀ ಎಸ್ ಆರ್. ನಾಗಪ್ಪಶೆಟ್ಟಿ.—ಆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲೇ ರೈತರೇ ಯಾರು ಬೇಕಾದರೂ ತಾವೇ ಸ್ವಂತವಾಗಿ ವ್ಯಾಪಾರ ಮಾಡುವುದಕ್ಕೆ ಅವಕಾಶವಿದೆಯೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆಗೊತ್ತಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗಿನ ನಿಮ್ಮ ಹರಾಜಿನ ಪದ್ಧತಿಯು ಅಡಿಕೆಯ ಬೆಲೆ ಬಿದ್ದು ಹೋಗಲು ಕಾರಣವಾಯಿತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹರಾಜನ್ನು ಕೂಗುವ ಸಂದರ್ಭದಲ್ಲಿ ಎಲ್ಲ ವರ್ತಕರೂ ಒಟ್ಟಾಗಿ ಮುಂಚೆಯೇ ಮಾತನಾಡಿಕೊಂಡು ಕೂಗಿ ಕಡಿಮೆ ಬೆಲೆಗೆ ಕೊಂಡು ಕೊಂಡು ಆಮೇಲೆ ಮಾಲನ್ನು ಹಂಚಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದನ್ನು ತಪ್ಪಿಸುವುದಕ್ಕಾಗಿಯೇ, ಈಗ ಒಂದು ರೂಪಾಯಿ ಲೈಸೆನ್ಸ್ ತಿಂಗಳಿಗೆ ತೆಗೆದುಕೊಳ್ಳಬೇಕೆಂದು ಮಾಡಿರುವುದನ್ನು 15 ದಿವಸಕ್ಕೆ ಬೇಕಾದರೂ ತೆಗೆದು ಕೊಳ್ಳಬಹುದೆಂದು ಅನುಕೂಲ ಮಾಡಿದ್ದೇವೆ. ಹೀಗೆಲ್ಲಾ ಮಾಡಿದ್ದರೂ ಈ ರೀತಿ ತೊಂದರೆಯಾಗುತ್ತದೆಯೆಂದರೆ ಅದು ಪ್ರಕೃತದಲ್ಲಿ ತಾತ್ಕಾಲಿಕವಾದದ್ದೆಂದು ಹೇಳಬಹುದು. Transition period ನಲ್ಲಿ ಹೀಗೆಲ್ಲಾ ತೊಂದರೆಗಳು ಉದ್ಭವಿಸುವುದು ಸಹಜ. ಒಟ್ಟಿನಲ್ಲಿ ಈ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಭವಿಷ್ಯ ಚೆನ್ನಾಗಿರುತ್ತದೆಂದು ಹೇಳಬಲ್ಲೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮೊದಲು ಗೋಡೌನ್ ರೆಂಟ್ ಏನೂ ಇರುತ್ತಿರಲಿಲ್ಲ. ಈಚೆಗೆ ರೆಗ್ಯುಲೇಟೆಡ್ ಮಾರ್ಕೆಟ್ ಬಂದಮೇಲೆ ಗೋಡೌನ್ ರೆಂಟ್ ಕೊಡಿಸಿಕೊಳ್ಳುತ್ತಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆಯೂ ಬೇರೆ ರೀತಿಯಲ್ಲಿ ತೆಗೆದುಕೊಳ್ಳುತ್ತಿದ್ದರು.

ಶ್ರೀ ಎಂ. ರಾಜಶೇಖರ ಮೂರ್ತಿ.—ಅಲ್ಲಿ ಮಳಿಗೆಗಳಿಲ್ಲದೆ, ವ್ಯಾಪಾರ ಮಾಡಲಕ್ಕೆ ಸುರುವೆ ರೈತರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಮಳಿಗೆಗಳಿಲ್ಲದೆ ತೊಂದರೆಯಾಗಿದೆ, ನಿಜ. ಇದೂ ತಾತ್ಕಾಲಿಕವಾದದ್ದು. ಇದಕ್ಕೂ ಏರ್ಪಾಡು ಮಾಡುತ್ತಿದ್ದೇವೆ. We know that warehouse is an important factor in the marketing of agricultural produce.

ಶ್ರೀ ಎಂ. ರಾಜಶೇಖರ ಮೂರ್ತಿ.—ವೇರ್ ಹೌಸ್ ಗಳ ಮೇರೆ ಎಷ್ಟು ಹಣವನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರಿ ?

Sri H. SIDDAVEERAPPA.—We will examine it.

Work Service Rules.

Q.—310. Sri D. VENKATESH (Gandhinagar).—

Will the Government be pleased to state :—

the various amendments to Work Service Rules since 1942 with regard to daily-rated and monthly-rated employees of the Government Industrial Concerns ?

A.—Sri H. SIDDAVEERAPPA (Minister for Home and Industries).—

A copy of the Work Service Rules brought up to date is laid on the Table of the House. The rules that were amended since 1942 have been indicated therein, with the dates on which they were amended.

Sri D. VENKATESH.—Is it not a fact that some of these Work Service Rules also form conditions of service in the Government concerns ?

Sri H. SIDDAVEERAPPA.—Yes.

Sri D. VENKATESH.—May I know subsequent to 1942 and prior to April 1952 how many times these Work Service Rules are amended ?

Sri H. SIDDAVEERAPPA.—I have placed the Government Order on the table, which gives the entire details and if the Hon'ble Member so desires, I will give a copy to him also.

Sri D. VENKATESH.—May I know whether these amendments are in conformity with the Mysore Labour Act then in existence ?

Sri H. SIDDAVEERAPPA.—So far as I can understand it, they are. If anything needs to be done, we will examine it.

Sri D. VENKATESH.—I may bring to your notice that none of these amendments were made in accordance with Section 10 of the Mysore Labour Act ?

Sri H. SIDDAVEERAPPA.—I will get it examined.

Alleged misappropriation of funds in certain Multi-purpose Co-operative Societies.

Q.—518. Sri G. PAPANNA (Sidlaghatta-Chikballapur) :—

Will the Government be pleased to state :—

(a) whether they have received any complaints that the funds of the Multi-purpose Co-operative Societies of Perasandra and Dibbur of Chikballapur Taluk and those of Sidlaghatta Kasaba and Jangamakote have been misappropriated ;

(*b*) the action taken in respect of each of these Multi-purpose Co-operative Societies on receipt of such complaints ?

A.—Sri H. SIDDAVEERAPPA (Minister for Home and Industries).—

(*a*) No complaints were received except in the case of Sidlaghatta Kasaba Multi-purpose Co-operative Society.

(*b*) The matter of Sidlaghatta Kasaba Circle Multi-purpose Co-operative Societies is under investigation by the Auditor

ಶ್ರೀ ಜಿ. ಪಾಪಣ್ಣ.—ಶಿಡ್ಲಘಟ್ಟ ಕಸಬ ಸೊಸೈಟಿಯ ಸಂಬಂಧದಲ್ಲಿ ದೂರು ಬಂದು ಎಷ್ಟು ದಿವಸ ಗಳಾಯಿತು ?

Sri H. SIDDAVEERAPPA.—The date is not available.

ಶ್ರೀ ಜಿ. ಪಾಪಣ್ಣ.—ಒಂದು ವರ್ಷಕ್ಕೆ ಮೇಲ್ಪಟ್ಟಾಯಿತೆಂದರೆ ಒಪ್ಪುತ್ತೀರಾ ?

Sri H. SIDDAVEERAPPA.—I want notice. Exact date ಈಗ ನನ್ನಲ್ಲಿಲ್ಲ.

ಶ್ರೀ ಜಿ. ಪಾಪಣ್ಣ.—ಇಂದಿನವರೆಗೂ ಆಡಿಟ್‌ಮಾಡಿ ಸದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಒಂದು ಸಾರಿ ಇನ್ಸ್‌ಪೆಕ್ಟರು ಹೋಗಿ ಆಡಿಟ್ ಮಾಡಿದರು. ಆದರೆ ಅದರಲ್ಲಿ discrepancy ಕಂಡು ಬಂದಿತು, ಆಷ್ಟು ಸಮರ್ಪಕವಾಗಿ ಕಾಣಲಿಲ್ಲ. ಈಚೆಗೆ ಇದಕ್ಕಾಗಿ ಒಬ್ಬ ಸರ್ಟಿಫೈಡ್ ಆಡಿಟರನ್ನು ನೇಮಿಸಿದ್ದೇವೆ. ಅವರಿಂದ ವರದಿ ಇನ್ನೂ ಬಂದಿಲ್ಲ. ಸರ್ಟಿಫೈಡ್ ಆಡಿಟರಿಂದ ವರದಿ ಬರುವವರೆಗೂ ಡೆಪ್ಯುಟಿ ಕಮೀಷನರು investigation ಮಾಡಬೇಕಾದದ್ದಿಲ್ಲವೆಂದು ತಿಳಿಸಿದ್ದೇನೆ.

ಶ್ರೀ ಜಿ. ಪಾಪಣ್ಣ.—ಅವರು ಆಡಿಟ್ ಫೀಜು ಕೊಟ್ಟಿಲ್ಲದಿರುವುದರಿಂದ, ಆಡಿಟ್ ಮಾಡುವುದಕ್ಕಾಗದೆ ವಾಪಸು ಬಂದರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಆಗಿರುವುದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ಪಾಪಣ್ಣ.—ಆ ರೀತಿ ಸರ್ಟಿಫೈಡ್ ಆಡಿಟರು ಹೋಗಿ ಆಡಿಟ್ ಮಾಡುವುದಕ್ಕಾಗದೆ ವಾಪಸು ಬರುವುದಕ್ಕೆ ಇರಾಖಿಯವರೇ ಕಾರಣರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ನೀವು ಹೇಳಿದ ಕಾರಣದಿಂದ ಆಡಿಟ್ ಆಗಿಲ್ಲದಿದ್ದರೆ, ಅದನ್ನು ವಿಚಾರಮಾಡಿ ಒಂದು ಅಭಿಪ್ರಾಯಕ್ಕೆ ಬರುತ್ತೇನೆ.

Kurihalli Kaval, Chiknaikanahalli Taluk.

Q.—582. Sri C. H. LINGADEVARU (Chiknaikanahalli) .—

Will the Government be pleased to state :—

(*a*) whether the Kurihalli Kaval, Kandikere Hobli in Chiknaikanahalli Taluk, is under the control of the Amruth Mahal Department ;

(*b*) (i) whether it is not a fact that a large portion of the said village kaval comes under the submerged tank bed of the Boranakanive tank ;

(ii) the number of acres in the submerged area and the number of acres under the control of the Amruth Mahal Department ;

(*c*) whether the cattle of the said Department have come to this kaval for grazing since the last ten years and if so, in what year ;

(*d*) the name of person that has obtained this kaval in auction since the last year ; and for how much ;

(*e*) whether they will consider the question of granting an equal extent of land for gomal purposes to Badakegudalu, Thimmanahalli and other villages lying adjacent to this kaval, in lieu of the land coming under the submersion area of Boranakanive tank ?